Reg No B G 155

6-2-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ನಿ. ಸುಬ್ಬರಾಯ ಸಂಪಾದಕ : ಧರ್ಮಪ್ರಚಾರಸಿರಿತ ಏ. ಎಸ್. ಕೃಷ್ಣರಾವ್ [2 ಪೈಸೆ

20 ಮಿಲಿಯ ಇಟಲಿಯವರ ಸಾಮೂಹಿಕ ಮುಷ್ಕರ

ಪದ್ಮಭೂಷಣ ವಾಪಸ್ಸು

ನವದೆಹಲಿ— ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಸಂಪಾದಕರಾದ ಶ್ರೀ ಚಲಪತಿ ರಾವ್ ತಮಗೆ ಕಳೆದ ವರ್ಷ ಗಣರಾಜ್ಯ ದಿನೋತ್ಸವದಂದು ರಾಷ್ಟ್ರಾಧ್ಯಕ್ಷರು ಕೊಟ್ಟ ಪದ್ಮಭೂಷಣ ಸನ್ನದು ಮತ್ತು ಪದಕವನ್ನು ವಾಪಸ್ಸು ಮಾಡಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ಸೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆಪ್ತ ವಿಶ್ವಾಸಗಳಿಂದ ನೀಡಿ ಸಹಕರಿಸಲೇ ಬೇಕಾಗಿ ವಿನಂತಿಸಿ, ಈಡೇರುವ ತನಕ ಆ ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ : 'ಸತ್ಯವಾದಿ'
ಚಾಮರಾಜಪುರಂ. ಮೈಸೂರು 4.

ಪದ್ಮಭೂಷಣ ಡಾ|| ಮೋದಿಯವರ ಕಾರ್ಯಕ್ರಮ

ತಾ || 11 ಹೊನ್ನಾವರ, ಕುಂಟಾ, ತಾ|| 12 ಗೋಕರ್ಣ, ಅಂಕೋಲ, ಕಾರವಾರ, ತಾ|| 13 ಯ್ಕಿಲಾಘರ, ಹಬ್ಬಳ್ಳಿ. ತಾ|| 18 ಸಿರ್ಸಿಯಲ್ಲಿ ಸೇತ್ರಪರೀಕ್ಷೆ ನಡೆಸುವರು. ಆಪರೇಷನ್ಗೆ ಸಲಹೆ ಮಾಡಲ್ಪಟ್ಟವರು ಸಿರ್ಸಿಯಲ್ಲಿ ತಾ|| 18 ರಂದು ಆಪರೇಷನ್ ಕ್ಯಾಂಪಿಗೆ ಬರತಕ್ಕದ್ದು.

●

ಚುನಾವಣೆ ಸಂದರ್ಭದಲ್ಲಿ

ಜಂಡೀಘರ್— ಪಂಜಾಬಿನ ಹಲವು ಕಡೆ 16 ಚುನಾವಣಾ ಘರ್ಷಣೆಗಳಾದವು.

★

ಮೀರತ್— ಪ್ರಸಾರ ವೋಟಿಂಗು ಸ್ಟೇಷನ್ನಿನ ಸ್ವಲ್ಪ ದೂರದಲ್ಲಿ ಎರಡು ರಾಜಕೀಯ ಪಕ್ಷಗಳ ಬೆಂಬಲಿಗರಲ್ಲಿ ಘರ್ಷಣೆಯಾಗಿ ಹತೋಟಿ ಮೀರಿದ ಗುಂಪನ್ನು ಚದುರಿಸಲು ಪೋಲೀಸರು ಗೋಳಿಬಾರ್ ಮಾಡಿದರು ; ಇಬ್ಬರು ಗಾಯಗೊಂಡರು.

●

ಲೂಟಿ

ಹೈದರಾಬಾದು— ಒಲಂಪಳ್ಳಿ ಕಲ್ಲಿಜ್ಜಲು ಪಟ್ಟಣದಲ್ಲಿ ನಾಯಕರು 500 ಮಂದಿ ಕಾರ್ಮಿಕರ ಮೆರವಣಿಗೆ ನಡೆಸಿ ಅಸಿಸ್ಟೆಂಟು ಮ್ಯಾನೇಜರು ಮನೆ ಮೇಲೆ ಧಾಳಿ ನಡೆಸಿ ಲೂಟಿಮಾಡಿ, ಮನೆಯಲ್ಲಿದ್ದವರನ್ನು ಹಿಂಸಿಸಲು ಪ್ರಯತ್ನಿಸಿದರು – ಪೋಲೀಸರು ಲಾಠಿ ಚಾರ್ಜು, ಅಶ್ರುವಾಯು ಪ್ರಯೋಗ ಮತ್ತು ಸಂಡುಹಾರಿಸಿದರು. ಆರು ಮಂದಿ ಗಾಯಗೊಂಡರು; ಕೆಲವರು ದಸ್ತಗಿರಿಮಾಡಲ್ಪಟ್ಟರು.

★

ಮದರಾಸು—ತಾ|| 16 ರಂದು ಅಣ್ಣಾದೊರೈ ಸ್ಮಾರಕ ದಿನವಾಗಿ ಡಿಎಂಕೆ ಆಚರಿಸುವುದು.

ಇಟಲಿಯಲ್ಲಿ ಭಾರಿ ಮುಷ್ಕರ

ರೋಮ್— ಎರಡನೆ ಪ್ರಪಂಚ ಯುದ್ಧಾನಂತರ ಸ್ಥಾಪಿತವಾದ ಗಣರಾಜ್ಯದಲ್ಲಿ ನಿನ್ನೆ 20 ಮಿಲಿಯ ಇಟಲಿಯನರು ಮುಷ್ಕರ ಹೂಡಿದ್ದರಿಂದ ಇಟಲಿಯು ನಿಸ್ಪಂದಗೊಂಡಿತ್ತು. ಹೆಚ್ಚು ವೇತನ ಕೇಳಿಕೆಗಾಗಿ ಇದು. ಕೈಗಾರಿಕೆ, ವ್ಯವಸ್ಥಾಯ, ವಾಣಿಜ್ಯ, ಟೆಲಿವಿಜ್ಞ, ಪತ್ರಿಕೆಗಳು, ಹಡಗು, ಚಲಚ್ಚಿತ್ರ ನಾಟಕ ಮಂದಿರಗಳು, ಬಸ್ಸು ಟ್ಯಾಕ್ಸಿ, ಫಲಾರಮಂದಿರಗಳು ಅಂಗಡಿಗಳೂ ಭಾಗವಹಿಸಿದ್ದವು.

●

ಎರಡನೇ ನೌಕಾಬಲ

ನವದೆಹಲಿ— ಎರಡನೇ ನೌಕಾಬಲ ನಿರ್ಮಿಸುವ ವಿವರವಾದ ಯೋಜನೆಯು ಕಟ್ಟಕಡೆ ಏರ್ಪಾಡಿನಲ್ಲಿದೆಯೆಂದೂ, ಇದನ್ನು ವಿಶಾಖಪಟ್ಟಣದಲ್ಲಿ ಸ್ಥಾಪಿಸಲಾಗುವುದೆಂದೂ ವರದಿಯಾಗಿದೆ.

★

ಅಣಾದೊರೈರಿಗೆ ಪಾರಿತೋಷ

ತಮಿಳು ಲೇಖಕರ ಸಂಘವು ಈ ವರ್ಷದ ತನ್ನ ಫೀಲ್ಡ್ ಪಾರಿತೋಷಕವನ್ನು ಉದ್ದಾಮ ಲೇಖಕರಾಗಿದ್ದ ಅಣ್ಣಾದೊರೈರಿಗೆ ಕೊಡಲು ನಿರ್ಧರಿಸಿದೆ.

○

ಮೆಹರ್ ಬಾಬ

ಬೊಂಬಾಯಿ— ಅಹಮದ್ನಗರ ಜಿಲ್ಲೆಯ ಪಿಂಪಲಗಾಂವ್ನಲ್ಲಿಯ ಒಂದು ಗುಹೆಯಲ್ಲಿ ಶುಕ್ರವಾರ ನಿಧನಗೊಂಡ ಸಂತ ಮತ್ತು ಜೋಧರ್ ಮೆಹರ್ ಬಾಬಾರವರ ಶರೀರವನ್ನು ಜನರು ಅಂತಿಮ ದರ್ಶನ ಪಡೆಯಲು ನಿರ್ದಿಷ್ಟ ಕಾಲ ಕಾಪಾಡಲ್ಪಟ್ಟಿರುವೆಂದು ಇಲ್ಲಿಗೆ ವಾರ್ತೆ ಬಂದಿದೆ.

ವಿಚಿತ್ರ ಕರು

ಶಿವಮೊಗ್ಗ— ಸಿಂಗಾರಿತಾ ಗ್ರಾಮದ ಒಂದು ಹಸು ಕೋತಿ ಮುಖದ ಮತ್ತು ಮೈಯೆಲ್ಲಾ ಕೂದಲಿದ್ದ ಹಸುವನ್ನು ಈಯಿತು. ಕರು ಹುಟ್ಟಿದ ಅರ್ಧ ಗಂಟೆಯಲ್ಲಿ ತೀರಿಹೋಯಿತು.

ರೈತ ಸಪ್ತಾಹ

ಮಂಗಳೂರು— ರೈತಸಪ್ತಾಹ ಸಮಾರಂಭದ ಅಂಗವಾಗಿ ಏರ್ಪಡಿಸಿರುವ ಮೂರು ದಿನಗಳ ವ್ಯವಸಾಯ ವಸ್ತುಪ್ರದರ್ಶನವು ರೈತರು ಮತ್ತು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ.

ಪ್ರಾಣಾರ್ಪಣೆ

ಪ್ರಾಗ್— ಜೆಗೊಸ್ಲೊವಿಯದ ಬೇರೆ ಬೇರೆ ಕಡೆ ಮೂರು ಮಕ್ಕಳು ಆತ್ಮಹತ್ಯ ಮಾಡಿಕೊಂಡವು.

ಕಮ್ಯೂನಿಸ್ಟರ ಹಾವಳಿ

ತ್ರಿವೇಂದ್ರಂ— ಮಂಜೀರಿ ದೇವಾಲಯಕ್ಕೆ ಸೇರಿದ ಭೂಮಿಯನ್ನು ಕಮ್ಯೂನಿಸ್ಟರು ಆಕ್ರಮಿಸಿರುವರೆಂದು ನೀಲಂಬೂರು ಪೋಲೀಸರಿಗೆ ದೂರುಕೊಡಲಾಗಿದೆ.

ಅನ್ನ ಸತ್ಯಾಗ್ರಹ

ಮಂಡ್ಯ— ಕೃಷ್ಣರಾಜಸಾಗರದಿಂದ ವರುಣಾನಾಲ ನಿರ್ಮಿಸುವುದನ್ನು ಪ್ರತಿಭಟಿಸಿ ನಿನ್ನೆ 7 ಮಂದಿ 24 ಗಂಟೆ ಉಪವಾಸ ಸತ್ಯಾಗ್ರಹ ನಡೆಸಿದರು.

ಭುಟ್ಟೋ ಭವಿಷ್ಯವಾಣಿ

ಲಾಹೋರು— ಅಧ್ಯಕ್ಷ ಅಯೂಬರು ಈ ವರ್ಷ ಮುಗಿಯುವುದರೊಳಗೆ ಅಧಿಕಾರ ಕಳೆದುಕೊಳ್ಳುವರೆಂದು ಬಂಧನದಲ್ಲಿರುವ ಮಾಜಿ ವಿದೇಶಾಂಗ ಮಂತ್ರಿ ಭುಟ್ಟೋ ಹೇಳಿರುವರು.

★

ಮೆಕಾಲೆ ಭವಿಷ್ಯವಾಣಿ

ಲಾರ್ಡ್ ಮೆಕಾಲೆಯು ಇಂಗ್ಲೀಷು ಭಾಷೆಯನ್ನು ಭಾರತದಲ್ಲಿ ಜಾರಿಗೆ ತಂದಾಗ 'ಪಾಶ್ಚಾತ್ಯ ವಿದ್ಯಾಭ್ಯಾಸದ ಫಲವಾಗಿ, ತಮ್ಮ ಚರ್ಮದ ವಿನಃ ಮಿಕ್ಕದ್ದರಲ್ಲೆಲ್ಲಾ ಇಂಗ್ಲೀಷ್ ಆಗಿರುವ ಒಂದು ಕುಲ ಉತ್ಪನ್ನವಿಸುವದು' ಎಂದು ಭವಿಷ್ಯ ನುಡಿದ್ದುದರ ಸತ್ಯತೆ ಈಗ ಕುಂಡುಬಂದಿದೆ ಎನ್ನುವರು ಹಲವರು!

ಪಾಕಿಸ್ಥಾನದಲ್ಲಿ

ನವದೆಹಲಿ— ಪಾಕಿಸ್ಥಾನದ ವಿರೋಧ ಪಕ್ಷಗಳ ನಾಯಕರು ತಾ॥ 17 ರಂದು ತಮ್ಮೊಡನೆ ಚರ್ಚಿಸಿ, ದೇಶದ ರಾಜಕೀಯ ಪರಿಸ್ಥಿತಿ ವಿಮರ್ಷಿಸಲು ಅಯೂಬರು ಆಹ್ವಾನಿಸಿರುನರು. ಎರಡು ವಾರ್ಷಗಳ ಸರ್ಕಾರದ ವಿರುದ್ಧ ಚಳವಳಿಯಲ್ಲಿ 32 ಜನ ಸತ್ತು 2000 ಕ್ಕೂ ಹೆಚ್ಚು ಮಂದಿಯು ದಸ್ತಗಿರಿಯಾಗಿದೆ.

Help The Goraksharia

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಿಗಳಿಗಾಗಿ ನಮ್ಮಲ್ಲಿ ದೊರೆಯುತ್ತವೆ

Protect the Cow

Edited, Printed & Published by Dharmaprakash Nirata M S Krishna Rao (Proprietor) at the Satyavadi Press Chamarajapuram, Mysore 4

ವುಡ್‌ಲಾಂಡ್ಸ್ 7-2-69 ರಿಂದ

.... ಮನಮೋಹಕ ಹಿಂದಿ ಚಿತ್ರ ....

ದಿ ವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯದ ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 2 ನೇ ವಾರ

— ಅತ್ಯಮೋಘ್ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.